ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-7 Special Issue-3, March - April 2026, Pp. 86-90**
**©*IIMRD*, Mysuru**

IIMRD JOURNALS

**www.iimrd.com**

# ಯಲಹಂಕ ನಾಡಪ್ರಭುಗಳ ಕಾಲದ ಕೃಷಿ ವ್ಯವಸ್ಥೆ : ಒಂದು ಅವಲೋಕನ

**ಅಂಬರೀಶ ಪಿ.ವಿ**

ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಸಾರಾಂಶ: (Abstract)**

*'ಎಲ್ಲಿ ನೀರು ಸಿಗುತ್ತದೆಯೋ ಅಲ್ಲಿ ನಾಗರಿಕತೆ ಬೆಳೆಯುತ್ತದೆ' ಎಂಬ ವಿಚಾರವು ಚರಿತ್ರೆಯ ಪುಟಗಳಲ್ಲಿ ಪ್ರಾಚೀನ ಕಾಲದಿಂದಲೂ ತಿಳಿಯಬಹುದು. ಮಾನವ ತನ್ನ ಜೀವನಕ್ಕಾಗಿ ಕಂಡುಕೊಂಡ ನೆಲೆಗಳಲ್ಲಿ ನೀರು ಪ್ರಮುಖವಾಗಿದೆ. ಸಾಮಾನ್ಯವಾಗಿ ನೀರು ಪ್ರಾಕೃತಿಕ ಅಂಶ. ನೀರನ್ನು ಕಂಡುಕೊಂಡ ಮಾನವ ಕಾಲಾಂತರದಲ್ಲಿ, ಆಹಾರದ ಪದ್ಧತಿಯಾದ ಬೇಟೆ, ಪಶುಪಾಲನೆಯ ಹಂತಗಳನ್ನು ದಾಟಿ, ಕೃಷಿಯನ್ನ ಜೀವನಾಧಾರದ ಮುಖ್ಯ ಕಸುಬೆಂದು ಭಾವಿಸಿದ್ದ. ವ್ಯವಸಾಯವನ್ನೇ ರೂಢಿಸಿಕೊಂಡು ಮಳೆ ಮತ್ತು ನದಿಗಳ ನೀರನ್ನು ಹಿಡಿದಿಟ್ಟುಕೊಂಡು ತನ್ನ ಅವಶ್ಯಕತೆಗೆ ತಕ್ಕಂತೆ ಬಳಸಿಕೊಳ್ಳಲು ನಡೆಸಿದ ಪ್ರಯತ್ನಗಳ ಫಲವಾಗಿ ಬಾವಿ, ಕೆರೆ, ಕುಂಟೆಗಳ ರೂಪದಲ್ಲಿ ನೀರನ್ನು ಸಂಗ್ರಹಿಸುವ ವಿಧಾನವನ್ನು ತಿಳಿದುಕೊಂಡನು. ಅಲೆಮಾರಿಯಾಗಿದ್ದ ಮನುಷ್ಯರು ಒಂದು ಸ್ಥಳದಲ್ಲಿ ನೆಲೆ ನಿಂತು, ತಮ್ಮ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಮುಂದಾದರು. ಆದರೆ ನೀರು ಸಂಗ್ರಹಿಸುವ ಕೆರೆಗಳ ರಚನೆಯು ಒಂದು ತಂತ್ರಜ್ಞಾನವಾಗಿ ಆಗ ರಚನೆ ಆಗಿರಲಿಲ್ಲ ಎನ್ನಬಹುದು. ನಂತರ ಕಾಲಮಾನದಲ್ಲಿ ಕೆರೆಗಳನ್ನು ನಿರ್ಮಾಣ ಮಾಡುವುದನ್ನು ನೋಡಬಹುದು, ಇದರಿಂದ ಕೆರೆ, ಕಟ್ಟೆಗಳನ್ನು ಕಟ್ಟಲು ಬಯಲು ಪ್ರದೇಶ ಮತ್ತು ಎರಡು ಬೆಟ್ಟಗಳ ಮಧ್ಯ ಭಾಗವನ್ನು ಆಯ್ಕೆ ಮಾಡಿಕೊಂಡು ನಿರ್ಮಾಣ ಮಾಡಿದರು. ಇದರಿಂದ ಅನುಕೂಲವನ್ನು ಪಡೆಯಲು ಪ್ರಯತ್ನಿಸಿದರು.*

**ಮುಖ್ಯಪದಗಳು (Keywords):** *ಕರ್ನಾಟಕ ಇತಿಹಾಸ, ಯಲಹಂಕ ನಾಡಪ್ರಭುಗಳು, ಕೃಷಿ ವ್ಯವಸ್ಥೆ*

**ಪೀಠಿಕೆ**

ನೀರಾವರಿ ವ್ಯವಸ್ಥೆಯನ್ನು ಒಂದು ಕಾಮಗಾರಿಯಿಂದಾಗಿ ಕೃಷಿಯ ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿದ್ದವು. ಈ ಹಿನ್ನೆಲೆಯಲ್ಲಿ ಅಂದಿನ ಯಲಹಂಕ ನಾಡಪ್ರಭುಗಳು ವಿಜಯನಗರ ಸಾಮ್ರಾಜ್ಯದ ಸಾಮಂತರಾಗಿ ಕೃಷ್ಣದೇವರಾಯರಿಂದ ಸ್ಫೂರ್ತಿಯಾಗಿ, ನೀರಾವರಿ ಕಾಮಗಾರಿಗಳನ್ನು ಕೈಗೊಂಡು ಅನೇಕ ಕೆರೆಗಳನ್ನು ನಿರ್ಮಾಣ ಮಾಡಿದ್ದಾರೆ. ಹೀಗೆ ಕಂಡುಬರುವ ಪ್ರಮುಖ ಕೆರೆಗಳು ಎಂದರೆ, ಕೆಂಪಾಂಬುದಿ ಕೆರೆ ಮತ್ತು ಧರ್ಮಾಂಬುದಿ ಕೆರೆ ಇವು ಪ್ರಮುಖವಾಗಿ ಕಂಡುಬರುತ್ತೆ.

*Please cite this article as:* ಅಂಬರೀಶ ಪಿ.ವಿ. (2026). ಯಲಹಂಕ ನಾಡಪ್ರಭುಗಳ ಕಾಲದ ಕೃಷಿ ವ್ಯವಸ್ಥೆ: ಒಂದು ಅವಲೋಕನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(3). ಪು.ಸಂ.* 86–90

ಈ ಹಿನ್ನೆಲೆಯಲ್ಲಿ ಪ್ರಾಚೀನ ಮತ್ತು ಮಧ್ಯಕಾಲಿನ ಯುಗದಲ್ಲಿ ನೀರಾವರಿ ವ್ಯವಸ್ಥೆಯ ಉಗಮ ಮತ್ತು ಬೆಳವಣಿಗೆಯಲ್ಲಿ ಸ್ಥಳೀಯ ಜನಸಮುದಾಯವು ನೇರ ಮತ್ತು ಸಕ್ರೀಯವಾಗಿ ಪಾತ್ರವಹಿಸಿದವು. ಕೆರೆಗಳನ್ನು ನಿರ್ಮಾಣ ಮಾಡುವ ಕಾರ್ಯಗಳು ಸುಲಭವಾಗಿ ನಡೆಯಲಿಲ್ಲ. ಇದರಿಂದ ರಾಜ್ಯದ ಆದಾಯದಲ್ಲಿ, ಕೃಷಿಯ ಪಾತ್ರವು ಭೂಕಂದಾಯ ದೊಡ್ಡ ಮಟ್ಟದಲ್ಲಿ ಗುರುತಿಸಲು ಸಾದ್ಯವಾಗುತ್ತದೆ.

**ನೀರಾವರಿ ಮತ್ತು ಕೃಷಿಯ ಪ್ರಮುಖ ಉದ್ದೇಶಗಳು**

- ಕುಡಿಯುವ ನೀರು ಸಂಗ್ರಹಣೆ ಮತ್ತು ಪೂರೈಕೆ.
- ದನಕರುಗಳ ಪೋಷಣೆ ಕೆರೆ, ಕುಂಟೆಗಳನ್ನು ನಿರ್ಮಾಣ ಮಾಡಿದರು.
- ದಿನ ಬಳಕೆ ನೀರಿಗಾಗಿ ಭಾವಿಗಳನ್ನು ಕೊರೆದರು.
- ತೋಟಗಾರಿಕೆ ಕೃಷಿ ಪ್ರಧಾನವಾಗಿ ಬೆಳೆಯಲು ಕೆರೆಗಳನ್ನು ನಿರ್ಮಿಸಿದರು.
- ಅತಿವೃಷ್ಠಿ ಮತ್ತು ಅನಾವೃಷ್ಠಿಯನ್ನು ತಡೆಯಲು ಅಣೆಕಟ್ಟುಗಳನ್ನು ನಿರ್ಮಾಣ ಮಾಡಿದರು.
- ದೇವಾಲಯಗಳ ಧಾರ್ಮಿಕ ವಿಧಿ ವಿಧಾನಗಳಿಗಾಗಿ ಕಲ್ಯಾಣಿಗಳನ್ನು ನಿರ್ಮಾಣ ಮಾಡಿರುವುದು ಚರಿತ್ರೆಯಲ್ಲಿ ಗುರಿತಿಸಬಹುದು.

ನಾಡಪ್ರಭುಗಳ ಕಾಲದಲ್ಲಿ ಶಾಸನಗಳ ಅಧ್ಯಯನದಿಂದ ಕೆರೆ ನಿರ್ಮಾಣ, ದುರಸ್ಥಿ ನಿರ್ವಹಣೆಯಂತಹ ಎಲ್ಲಾ ವಿಧವಾದ ಜವಬ್ಧಾರಿಗಳನ್ನು ಪ್ರೊತ್ಸಾಹಿಸಿದ, ರಾಜರ ಭೂಮಿ, ಹಣ, ತೆರಿಗೆ ವಿನಾಯಿತಿ ನೀಡವುದರ ಮೂಲಕ ಕೆರೆ ನೀರಾವರಿ ವ್ಯವಸ್ಥೆ ಮತ್ತು ಕೃಷಿಯಲ್ಲಿ ಭಾಗವಹಿಸಿದವರಿಗೆ ಸಾಮಾಜಿಕ ಮತ್ತು ರಾಜಕಿಯ ಮನ್ನಣೆ ಇತ್ತು. ಸ್ಥಳಿಯ ಮುಖ್ಯಸ್ಥರಿಗೆ ಪ್ರೇರಣೆಯನ್ನು ನೀಡುವುದನ್ನು ಬರ್ಟನ್ ಸ್ಪೈನ್ ನವರು ಗುರುತಿಸಿದ್ದಾರೆ. ರಾಜ್ಯದ ಆದಾಯ ಹೆಚ್ಚಿಸುವಂತಹ ಕೃಷಿಗೆ ನೀರಾವರಿ ಕೆಲಸಗಳನ್ನು ಸಮುದಾಯದ ಕ್ರಿಯಾ ಚಟುವಟಿಕೆಗಳಾಗಿ ರೂಪುಗೊಂಡು ಪರಂಪರೆಯಾಗಿ ಬೆಳೆದು ಬಂದ ಸಂಪ್ರದಾಯವು ವಿಜಯನಗರದ ಪತನ ನಂತರವು ರಾಜಕೀಯ ವ್ಯವಸ್ಥೆಯ ರೂಢಿಯಲ್ಲಿದ್ದ ಕೃಷಿ–ನೀರಾವರಿ ಕಾಮಗಾರಿಗಳನ್ನು ಪರಂಪರೆಯಾಗಿ ಹಲವು ರೀತಿ ನೀತಿಗಳನ್ನು ಮುಂದುವರಿಸಿಕೊಂಡು ಬಂದಿರುವುದನ್ನು ನಾಡಪ್ರಭುಗಳ ಆಡಳಿತದ ಕಾಲದಲ್ಲಿನ ಶಾಸನಗಳಲ್ಲಿ ನೋಡಬಹುದು.

ಇವರ ಕಾಲದ ಕೃಷಿಯಲ್ಲಿ ಬೆಳೆಯುವಂತಹ ಪ್ರಮುಖವಾದ ಆಹಾರ ಬೆಳೆಗಳು ಎಂದರೆ ಭತ್ತ, ರಾಗಿ, ಸಜ್ಜೆ, ನವಣೆ, ಮೆಕ್ಕೆಜೋಳ ಮುಂತಾದವುಗಳನ್ನು ಗುರಿತಿಸಬಹುದಾಗಿದೆ. ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಂಡು ಅದರ ವಿಶಾಲ ಅರ್ಥದಲ್ಲಿ ಕೃಷಿಯನ್ನು ಮತ್ತು ತೋಟಗಾರಿಕೆಯನ್ನು ಅಭಿವೃದ್ದಿಪಡಿಸುವುದು, ಕೃಷಿಯಿಂದ ರಾಜ್ಯ ಆದಾಯವನ್ನು ಹೆಚ್ಚಿಸಿ ನೀರಾವರಿ ವ್ಯವಸ್ಥೆಗೆ ಹೆಚ್ಚು ಆದ್ಯತೆಯನ್ನು ನೀಡಿದ್ದಾರೆ. ಹಾಗೆಯೇ ಕೆರೆಗಳ ನಿರ್ಮಾಣದ ಮೂಲಕ ಕೃಷಿ ಮತ್ತು ನೀರಾವರಿ ಅಭಿವೃದ್ದಿಗೆ, ಸಹಕಾರಿಯಾಗಿ ಅವರು ನಿಂತರು ಎಂದು ಚರಿತ್ರೆಯ ಅಧ್ಯಯನದಿಂದ ತಿಳಿದುಬರುತ್ತದೆ.

ಯಲಹಂಕ ನಾಡಪ್ರಭುಗಳ ಪ್ರಭುತ್ವವು ಬೆಂಗಳೂರು ಉತ್ತರ–ದಕ್ಷಿಣ ಹೊಸಕೋಟೆ ಭಾಗದ, ವಾಯುವ್ಯ ಭಾಗ ದೇವನಹಳ್ಳಿ, ಯಲಹಂಕ ಪ್ರದೇಶ, ನೆಲಮಂಗಲ ಮತ್ತು ಮಾಗಡಿ ತಾಲೂಕುಗಳಾದ್ಯಂತ ವಿಸ್ತರಿಸಿತ್ತು. ಈ ಭೂಪ್ರದೇಶದಲ್ಲಿ ಗುರುತಿಸಬಹುದಾದ ಅರ್ಕಾವತಿ, ವೃಷಭಾವತಿ ನದಿಗಳು ಇವೆಯಾದರೂ ತುಂಬಿ ಹರಿಯುವ ನದಿಗಳಲ್ಲ. ಹೀಗಾಗಿ ಈ ಪ್ರದೇಶದಲ್ಲಿ ನಿರ್ಮಾಣಗೊಂಡ ಕೆರೆ, ಕಟ್ಟೆ, ಬಾವಿ, ಕುಂಟೆಗಳು ನೀರಾವರಿ ಮೂಲಗಳಾಗಿದ್ದವು. ಪೆನ್ನಾರ ಜಲಾನಯನ ಪ್ರದೇಶದ ಅರ್ಕಾವತಿ, ವೃಷಭಾವತಿ ಮತ್ತು ದಕ್ಷಿಣ ಪೆನ್ನಾರ ಸರಣಿ ಮತ್ತು ಉಪಸರಣಿಯಲ್ಲಿ ನಿರ್ಮಾಣಗೊಂಡಿರುವ ಕೆರೆಗಳು. ಅಲ್ಲಿನ ನೀರಾವರಿ ಚೌಕಟ್ಟು ಸುಮಾರು 400 ವರ್ಷಗಳಿಗೂ ಮಿಗಿಲಾಗಿ ಯಲಹಂಕ ನಾಡಪ್ರಭುಗಳ ಆಳ್ವಿಕೆಯ ಪ್ರದೇಶದಲ್ಲಿದ್ದವು. ಅವರು ಪಾರಂಪರಿಕ ಕೆರೆ ನೀರಾವರಿ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಬಂದಿರುವುದಷ್ಟೆ ಅಲ್ಲದೆ, ಅನೇಕ ಹೊಸ ಕೆರೆಗಳ ನಿರ್ಮಾಣ, ದುರಸ್ಥಿ ಹಾಗೂ ನಿರ್ವಹಣೆಗೆ ಆದ್ಯತೆ ನೀಡಿದರು. ಇವು ಯಾವುದೇ ಸಾಮ್ರಾಜ್ಯದ ರಾಜರ ಆದರ್ಶಗಳಿಗೆ ಕಡಿಮೆ ಇಲ್ಲದಂತೆ ಮುಂದುವರಿಸಿಕೊಂಡು ಬಂದಿರುತ್ತಾರೆಂಬ ಅಂಶವು ಇತಿಹಾಸದಲ್ಲಿ ಗಮನ ಸೆಳೆಯುತ್ತದೆ.

ಯಲಹಂಕ ನಾಡಪ್ರಭುಗಳ ಕಾಲದ ಪ್ರಮುಖ ನೀರಾವರಿ ಯೋಜನೆಗಳೆಂದರೆ ಹಿರಿಯ ಕೆಂಪೇಗೌಡ ತಮ್ಮ  ಕುಲದೇವತೆಯಾದ ಕೆಂಪಮ್ಮನ ಹೆಸರಿನಲ್ಲಿ ನಿರ್ಮಾಣ ಮಾಡಿದ ಕೆಂಪಾಂಬುದಿ ಕೆರೆಯು ಅತ್ಯಂತ ಪ್ರಮುಖವಾಗಿದೆ. ಅದೇರೀತಿಯಾಗಿ  ಧರ್ಮಾಂಬುದಿ ಕೆರೆಯನ್ನು  ಧರ್ಮದೇವತೆಯ ಹೆಸರಿನಲ್ಲಿ ನಿರ್ಮಾಣ ಮಾಡಲಾಗಿದೆ. ಹಿರಿಯ ಕೆಂಪೇಗೌಡ ರಾಣಿವಾಸದಲ್ಲಿ ಸಿದ್ದಮ್ಮ ಎಂಬಾಕೆ ಹೆಸರಿನಲ್ಲಿ ಸಿದ್ದಕಟ್ಟೆ ಎಂಬ ಕಲ್ಯಾಣಿಯನ್ನು ನಿರ್ಮಿಸಿದ್ದಾರೆ.

ಬೆಂಗಳೂರಿನ ನಾಡಪ್ರಭು ಶ್ರೀಕೆಂಪೇಗೌಡರು, ಹಲವು ಕಲ್ಯಾಣಿಗಳನ್ನು ದೇವಾಲಯದಲ್ಲಿಯೇ ನಿರ್ಮಿಸಿದ್ದಾರೆ. ಅವುಗಳೆಂದರೆ, ಅಣ್ಣಮ್ಮ ದೇವಾಲಯದ ಅಕ್ಕಪಕ್ಕ, ಚಿಕ್ಕಲಾಲ್‌ಬಾಗ್, ಶ್ರಿಕೃಷ್ಣ ದೇವಾಲಯದಲ್ಲಿ ಅದರ ರಸ್ತೆಯ ಎದುರು ಚೌಡೇಶ್ವರಿ ದೇವಾಲಯದ, ಚಿಕ್ಕಪೇಟೆ, ಮಾರುಕಟ್ಟೆ, ಸಿದ್ದಿಕಟ್ಟೆ, ಸಂಪಂಗಿ ನಗರದ ಬಳಿ ಕಲ್ಯಾಣಿಗಳನ್ನು ನಿರ್ಮಿಸಿದ್ದಾರೆ. ಆದರೆ ಇವೆಲ್ಲ ಇಂದು ಬೆಂಗಳೂರಿನ ನಗರೀಕರಣ ಪ್ರಕ್ರಿಯೆಯಲ್ಲಿ ಕಾಣೆಯಾಗಿದ್ದು ವಿಷಾದನೀಯ ಅಂಶವಾಗಿದೆ ಎಂಬುದರಲ್ಲಿ ಸಂದೇಹವೇ ಇಲ್ಲ.

ಈ ನೀರಾವರಿ ಯೋಜನೆ ಅವಲೋಕನದಿಂದ ವ್ಯಕ್ತವಾಗುವ ಹಲವು ಅಂಶಗಳಲ್ಲಿ ನಗರೀಕರಣ ಪ್ರಕ್ರಿಯೆಗೆ ಅಗತ್ಯವಾಗಿದ್ದು, ಜಲಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವಲ್ಲಿ ಪ್ರಮುಖ ಪಾತ್ರವಹಿಸಿರುವುದು ಕಂಡುಬರುತ್ತದೆ. ಕೆರೆಗಳ ನಿರ್ಮಾಣವು ನೀರಿನ ನಿರ್ವಹಣೆಗೆ ಅಗತ್ಯಕ್ಕಿಂತಲೂ ಅನಿವಾರ್ಯವಾಗಿತ್ತೆಂದು ತಿಳಿಯಬಹುದು.

ಬಾವಿ, ಕಲ್ಯಾಣಿಗಳು ನಗರದ ಜನರಿಗೆ ಜಲಮೂಲಗಳಾಗಿ ಕಾರ್ಯನಿರ್ವಹಿಸಿದ್ದು ಸಾಧಾರಣವಾಗಿ ಆಡಳಿತಗಾರರು ಪ್ರಯೋಜನವನ್ನು ಪಡೆದಿದ್ದಾರೆ. ಅಣ್ಣಮ್ಮ ದೇವಾಲಯದ ಹಿಂಬದಿಯಲ್ಲಿ ಈಗಿನ ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಎರಡು ತೂಬುಗಳಿದ್ದವು. ಒಂದು ಅರಮನೆಯ ಒಳಗೆ ನೀರು ಹರಿಯಲು ಮತ್ತೊಂದು ಕೃಷಿಯ ಬೆಳವಣಿಗೆ ಉಪಯೋಗಿಸಿಲು ಈ ಕೆರೆ ಏರಿಯ ಮೇಲೆ ನಾಲ್ಕು ದಿಕ್ಕುಗಳಲ್ಲಿ

ಅಲಂಕಾರಿಕ ಗೋಪುರಗಳಿವೆ. ಈ ಧರ್ಮಾಂಬುದಿ ಕೆರೆಯ ಪ್ರದೇಶದ ಸುತ್ತಮುತ್ತಲಿನ ದೇವಾಲಯಗಳು, ಮಠಗಳು, ಕಲ್ಯಾಣಿಗಳು ಇದ್ದವು. ದೇವಾಲಯ ಬಿಟ್ಟು ಉಳಿದ ಎಲ್ಲಾ ಕೆರೆಗಳು ನಗರೀಕರಣದಿಂದ ವಸತಿ ಯೋಜನೆಗಳಾಗಿ ಮಾರ್ಪಾಡಾಗಿವೆ ಎಂದರೆ ತಪ್ಪಾಗಲಾರದು.

ಬೆಂಗಳೂರಿನಲ್ಲಿರುವ ಕೋಟೆಯ ನಿರ್ಮಾಣದ ಸಂದರ್ಭದಲ್ಲಿ, ಕೆಂಪೇಗೌಡ ವೀಕ್ಷಣೆಗೆ ಬಂದಾಗ ಹರಿದು ಹೋಗುತ್ತಿದ್ದ ನೀರನ್ನು ಸಂಗ್ರಹಿಸಲು ಒಂದು ಕಟ್ಟೆಯನ್ನು ನಿರ್ಮಾಣ ಮಾಡಿದರು. ಈ ಕೆರೆ **"**ಸಂಪಂಗಿಕೆರೆ**"** ಎಂದು ಹೆಸರು ಪಡೆದು ಕೃಷಿಗೆ ನೀರನ್ನು ಒದಗಿಸುವುದುರ ಜೊತೆಗೆ ಕೋಟೆಯೊಳಗೆ ಕುಡಿಯುವ ನೀರಿಗಾಗಿ ಬಳಿಸಿಕೊಳ್ಳಲಾಗುತಿತ್ತೆಂದು ತಿಳಿದುಬರುತ್ತದೆ.

ವೃಷಭಾವತಿ ನೀರನ್ನು ಸದುಪಯೋಗಪಡಿಸಿಕೊಳ್ಳಲು ಬೆಂಗಳೂರು ಪಶ್ಚಿಮದಲ್ಲಿ ಜಕ್ಕರಾಯನ ಕೆರೆಯನ್ನು ನಿರ್ಮಿಸಿದರು. ನಂತರ ತಮ್ಮ ಪೂರ್ವಿಕರಾದ ಗಿಡ್ಡಪ್ಪ ಗೌಡನ ಹೆಸರಿನಲ್ಲಿ **"**ಗಿಡ್ಡಪ್ಪ ಗೌಡ ಕೆರೆ**"** ನಿರ್ಮಿಸಿದರು. (ಬಿನ್ನಿ ಮಿಲ್ ಕೆರೆ) ನೀರಿನ ಸಂಪನ್ಮೂಲಗಳನ್ನು ಬಳಸಿಕೊಂಡು ಕೃಷಿ–ಆದಾರಿತ ಆರ್ಥಿಕ ವ್ಯವಸ್ಥೆಯನ್ನು ಬಲಪಡಿಸಲು ನಾಡಪ್ರಭು ಕೆಂಪೆಗೌಡರು ಶ್ರಮಿಸಿರುವುದು ಚರಿತ್ರೆಯಲ್ಲಿ ಉಲ್ಲೇಖವಾಗಿದೆ.

ಸರಣಿಯೋಪಾದಿಯಲ್ಲಿ ನಿರ್ಮಾಣಗೊಂಡಿರುವ ಬೆಂಗಳೂರಿನ ಕೋರಮಂಗಲ ಕೆರೆ, ಆಡುಗೋಡಿ ಕೆರೆ, ಜೋಳಘಟ್ಟ ಕೆರೆಗಳಿಂದ ನೀರು ಹರಿದು, ದೊಮ್ಮಲೂರು, ಬೆಳ್ಳಂದೂರು ಕೆರೆ ಸೇರುವ ಮುಂದೆ ವರ್ತೂರು ಬಳಿ ಕಟ್ಟಡವನ್ನು ನಿರ್ಮಿಸಿದರು. ಯಲಹಂಕ ನಾಡಪ್ರಭುಗಳು ಚನ್ನಮನಕೆರೆ, ಹಲಸೂರು ಕೆರೆ, ಯಡಿಯೂರು ಕೆರೆಗಳನ್ನು ನಿರ್ಮಿಸುವುದರ ಮೂಲಕ ಕೆರೆಗಳ ನೀರಿನಿಂದ ನೀರಾವರಿ ಅಭಿವೃದ್ದಿಯಾಗಿದೆ. ಅದಲ್ಲದೆ ಇವರು ಕೃಷಿ ಚೌಕಟ್ಟಿನಿಂದ ರೈತರ ಅಭಿವೃದ್ದಿಗೆ ಪ್ರಮುಖ ಪಾತ್ರ ವಹಿಸಿದ್ದರು ಎಂದು ತಿಳಿದುಬರುತ್ತದೆ.

ಕೃಷಿಯು ಈ ನಾಡಿನ ಆರ್ಥಿಕ ವ್ಯವಸ್ಥೆಯ ಬೆನ್ನೆಲುಬಾಗಿದ್ದು, ವರ್ಷದಲ್ಲಿ ಎರಡು ಬಾರಿ, ಮುಂಗಾರು ಮತ್ತು ಹಿಂಗಾರು ಎಂಬ ಬೆಳೆಗಳನ್ನು ಬೆಳೆಯುತ್ತಿದ್ದರು. ಬೆಳೆಯನ್ನು ಬಿತ್ತನೆ ಮಾಡಲು ಗ್ರಾಮ ದೇವತೆಗಳನ್ನು ಮತ್ತು ಹಸುಗಳಿಗೆ ಪೂಜೆ ಮಾಡಿ ಭೂಮಿಯನ್ನು ಉಳುಮೆ ಮಾಡುತ್ತಿದ್ದರು ಎಂಬುದು ತಿಳಿದ ವಿಚಾರವಾಗಿತ್ತು.

**ಉಪಸಂಹಾರ**

ಈ ರೀತಿಯಾಗಿ ನೀರಾವರಿ ಮತ್ತು ಕೃಷಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಂತಹ ಸ್ಥಳೀಯ ವ್ಯಕ್ತಿಗಳ ಶಕ್ತಿ, ಸಾಮರ್ಥ್ಯಗಳನ್ನು ಅರಿತು ಅವರ ಆಸಕ್ತಿ–ಶ್ರದ್ದೆಗೆ ಸೂಕ್ತವಾಗಿ ಸ್ಪಂದಿಸಿದ ಯಲಹಂಕ ನಾಡಪ್ರಭುಗಳು ಈ ಪ್ರದೇಶದ ನೀರಾವರಿ ಮತ್ತು ಕೃಷಿ ಚೌಕಟ್ಟಿನ ಸುದಾರಣೆಗೆ ವಿಶೇಷ ಗಮನ ನೀಡಿರುವುದು ಕಂಡುಬರುತ್ತದೆ. ಇದರಿಂದ ಬೆಂಗಳೂರು ನಗರೀಕರಣ ಪ್ರಕ್ರಿಯೆಗೆ ಸಾವಿರಾರು ವರ್ಷಗಳ ಹಿಂದೆಯೆ ಚಾಲನೆ ನೀಡಿ ಬೆಳಸಿದ ಕೀರ್ತಿ ಕೆಂಪೇಗೌಡ ಮತ್ತು ಅವರ ವಂಶಸ್ಥರಿಗೆ ಸಲ್ಲುತ್ತದೆ ಎಂಬಂತೆ ಅನೇಕ ಇತಿಹಾಸಕಾರರ ಅಭಿಪ್ರಾಯ.

**ಪರಾಮರ್ಶನ ಗ್ರಂಥಗಳು:**


- ಚಂದ್ರಮೌಳಿ. (2002). *ಬೆಂಗಳೂರಿನ ನೋಟುಗಳು.* ಬೆಂಗಳೂರು.
- ಗಂಗಾಂಬಿಕೆ, ಎಸ್. (2021). *ಕೆಂಪೇಗೌಡರು ಮತ್ತು ಅವರ ವಂಶೀಯರು (ಹೊಸ ಪರಿವಿಕ್ಷಣೆಗಳು)*, ಅಪ್ಸರ ಪಬ್ಲೀಷರ್.
- ಗೋಪಾಲ, ಆರ್. (2010). *ನಾಡಪ್ರಭು ಕೆಂಪೇಗೌಡರ ಜೀವನ ಮತ್ತು ಸಾಧನೆಗಳು.* ಮೈಸೂರು ಪ್ರಾಚ್ಯವಸ್ತು ಸಂಗ್ರಾಲಯ.
- ಜಮುನ, ಎಂ. (2006). *ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ.* ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ.
- ಕವಿತಾಕೃಷ್ಣ. (2011). *ಬೆಂಗಳೂರು ನಿರ್ಮಾಪಕ ಕೆಂಪೇಗೌಡ.* ಅನ್ನಪೂರ್ಣ ಪಬ್ಲಿಕೆಷನ್ ಹೌಸ್.
- ಕಾಮತ್, ಎಸ್.ವಿ. *ಬೆಂಗಳೂರು ಜಿಲ್ಲಾ ಗೆಜೆಟಿಯರ್.*
- ಕೃಷ್ಣರಾವ್, ಎಂ.ವಿ. (1964). *ಬೆಂಗಳೂರು ಕೆಂಪೆಗೌಡ.* ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.
- ಮೂರ್ತಿ, ಮ.ನ. (1967). *ಬೆಂಗಳೂರು ಕೆಂಪೆಗೌಡ.* ಕಾಮಧೇನು ಪ್ರಕಾಶನ.
- ಸುಕಂ ಗೋವರ್ಧ. (2021). *ಮಾಗಡಿ ತಾಲೂಕಿನ ಶಾಸನಗಳು ಹೊಸ ಹೊಳವುಗಳು.* ಅಗಮ್ಯ ಪಬ್ಲಿಕೇಷನ್ಸ.